**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/ಚುನಾವಣೆ/8/2014

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ
ಕಟ್ಟಡ, ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:18.03.2014

## -:ಸುತ್ತೋಲೆ:-

**ವಿಷಯ:-** ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘ ಸಂಸ್ಥೆಗಳ ಚುನಾವಣೆಗೆ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವಿಕೆ -ಬಂದೋಬಸ್ತ್ ಕರ್ತವ್ಯದ ಸಂಬಂಧ ಶುಲ್ಕ ಪಾವತಿ ದರವನ್ನು ನಿಗಧಿಪಡಿಸುವ ಕುರಿತು.

**ಉಲ್ಲೇಖ:-**

1. ಸರ್ಕಾರದ ಪತ್ರ ಸಂಖ್ಯೆ:ಹೆಚ್.ಡಿ/210/ಎಸ್‌ಎಸ್‌ಟಿ/2013 ದಿನಾಂಕ:13.08.2013 ಮತ್ತು ಸರ್ಕಾರದ ಆದೇಶ ಸಂಖ್ಯೆ:ಹೆಚ್.ಡಿ/136/ಇಎಫ್‌ಎಸ್/2010 ಬೆಂಗಳೂರು ದಿನಾಂಕ:21.08.2012
2. ಸಹಕಾರ ಚುನಾವಣಾ ಆಯೋಗದ ಪತ್ರ ಸಂಖ್ಯೆ: ಸಚುಆ/ 08/2013-14/220 ದಿನಾಂಕ:20.08.2013
3. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ/210/ಎಸ್‌ಎಸ್‌ಟಿ/2013, ಬೆಂಗಳೂರು ದಿನಾಂಕ:04.03.2014

***

ಕರ್ನಾಟಕ ರಾಜ್ಯದಲ್ಲಿ ಸಹಕಾರ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂದ ನಂತರ, ರಾಜ್ಯದಲ್ಲಿನ ಸಹಕಾರ ಸಂಘಗಳ /ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ರಾಜ್ಯ ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿಯಂತ್ರಣ ಹಾಗೂ ಮಾರ್ಗದರ್ಶನಗಳಿಗೊಳಪಟ್ಟು ನಡೆಸಲಾಗುತ್ತಿದೆ. ಸಹಕಾರ ಸಂಘಗಳ /ಸಹಕಾರಿಗಳ ಮಂಡಲಿಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಆಯೋಗವು ಜಿಲ್ಲಾ ಚುನಾವಣಾಧಿಕಾರಿಗಳು /ರಿಟರ್ನಿಂಗ್ ಅಧಿಕಾರಿಗಳು/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸುತ್ತಿದೆ. ಸಹಕಾರ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲು ಆರಕ್ಷಕ ಇಲಾಖಾಧಿಕಾರಿಗಳ ನೆರವು ಅತ್ಯಾವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರಕ್ಷಕ ಸಿಬ್ಬಂದಿ/ ಅಧಿಕಾರಿಗಳಿಗೆ ಸಂಬಂಧಿಸಿದ ಸಹಕಾರ ಸಂಘಗಳು /ಸಹಕಾರಿಗಳು ಪಾವತಿಸಬೇಕಾದ ಸಂಭಾವನೆ ಕುರಿತು ಒಳಾಡಳಿತ ಇಲಾಖೆಯನ್ನು ಕೋರಲಾಗಿತ್ತು.

ಉಲ್ಲೇಖಿತ (1) ರ ಪತ್ರ /ಸರ್ಕಾರಿ ಆದೇಶದಲ್ಲಿ ಆರಕ್ಷಕ ಅಧಿಕಾರಿ /ಸಿಬ್ಬಂದಿಗಳನ್ನು ವಾಣಿಜ್ಯ ಚಟುವಟಿಕೆ, ಮನರಂಜನಾ ಸ್ಥಳಗಳಿಗೆ ಹಾಗೂ ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜಿಸಿದಾಗ ವಸೂಲಿ ಮಾಡುವ ಶುಲ್ಕವನ್ನು ಹೆಚ್ಚಿಸಲು ಷರತ್ತುಗಳಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ. ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಈ ಪತ್ರಕ್ಕೆ ಲಗತ್ತಿಸಿದೆ. ಸರ್ಕಾರದ 21.08.2012 ರ ಆದೇಶದಲ್ಲಿ ಆರಕ್ಷಕ ಅಧಿಕಾರಿಗಳನ್ನು ವಾಣಿಜ್ಯ ಚಟುವಟಿಕೆಗಳಿಗೆ ಅಂದರೆ ಸಿನಿಮಾ, ಕ್ರೀಡಾ ಪಂದ್ಯ, ವಸ್ತು ಪ್ರದರ್ಶನ, ರೇಸ್‌ಕೋರ್ಸ್ ಇತ್ಯಾದಿ ಮನರಂಜನಾ ಸ್ಥಳಗಳಿಗೆ ಬಂದೋಬಸ್ತ್ ನಿಯೋಜಿಸುವ ಸಂಬಂಧ ವಸೂಲಿ ಮಾಡಬೇಕಾದ ಶುಲ್ಕಗಳ ಬಗ್ಗೆ ವಿವರಗಳಿರುತ್ತವೆ. ಸಹಕಾರ ಸಂಸ್ಥೆಗಳು ಆರ್ಥಿಕ ಚಟುವಟಿಕೆಗಳ ಉದ್ದೇಶವನ್ನು ಹೊಂದಿದ್ದರೂ ಸೇವಾ ಸಂಸ್ಥೆಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ದಿನಾಂಕ: 13.08.2013 / 21.08.2012 ರ ಆದೇಶದಂತೆ ಮನರಂಜನಾ ಸಂಸ್ಥೆಗಳಿಗೆ ನಿಗಧಿಪಡಿಸಿರುವ ದರಗಳಲ್ಲೇ ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಸುವ ಸಹಕಾರಿ ಸಂಸ್ಥೆಗಳಿಗೂ ನಿಗದಿಪಡಿಸಿ ಶುಲ್ಕ ವಸೂಲಿ ಮಾಡುವುದು ಸರಿಯಲ್ಲವಾದ ಕಾರಣ ಸಮಂಜಸವೆನಿಸುವ ಶುಲ್ಕ ದರಗಳನ್ನು ವಿಧಿಸುವ ಹಾಗೂ ವಿನಾಯಿತಿ ನೀಡುವ ಕುರಿತು ಸರ್ಕಾರಕ್ಕೆ ಉಲ್ಲೇಖ (2) ರ ದಿನಾಂಕ:20.08.2013 ರಲ್ಲಿ ಪ್ರಸ್ತಾವನೆ ಸಲ್ಲಿಸಿ ಕೋರಲಾಗಿತ್ತು.

---2

ಆಯೋಗದ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಉಲ್ಲೇಖ (3) ರಲ್ಲಿ ಕಾಣಿಸಿರುವಂತೆ ಶುಲ್ಕವನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ, ಜಿಲ್ಲಾ ಮಟ್ಟದ ಒಕ್ಕೂಟಗಳು, ಪಟ್ಟಣ ಸಹಕಾರ ಸಂಘಗಳು / ಬ್ಯಾಂಕುಗಳು /ಸೌಹಾರ್ದ ಸಹಕಾರಿಗಳು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಶೇ.50% ರಷ್ಟು ಹಾಗೂ ಉಳಿದ ಸಹಕಾರ ಸಂಘಗಳಿಗೆ /ಸೌಹಾರ್ದ ಸಹಕಾರಿಗಳಿಗೆ ಕನಿಷ್ಟ ಶೇ.25 ರಷ್ಟು ಶುಲ್ಕವನ್ನು ವಿಧಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ. ಸರ್ಕಾರದ ದಿನಾಂಕ:04.03.2014ರ ಆದೇಶದ ಪ್ರತಿಯನ್ನು ಈ ಕೂಡ ಲಗತ್ತಿಸಿ ಕಳುಹಿಸಲಾಗಿದೆ.

ರಾಜ್ಯದಲ್ಲಿನ ಚುನಾವಣೆ ನಡೆಸುವ ಸಂಬಂಧಿಸಿದ ಸಹಕಾರ ಸಂಸ್ಥೆಗಳು ಸರ್ಕಾರದ 04.03.2014ರ ಆದೇಶದಂತೆ ಚುನಾವಣಾ ಸಂಬಂಧ ಪೊಲೀಸ್ ಬಂದೋಬಸ್ತ್‌ಗಾಗಿ ಪರಿಷ್ಕರಿಸಿದ ದರದಂತೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಸಂಬಂಧ ಸಂಬಂಧಿಸಿದ ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಜಿಲ್ಲಾ ಸಹಕಾರ ಸಂಘಗಳ ಉಪ ಪ್ರಾಂತೀಯ /ಜಂಟಿ /ಕೇಂದ್ರ ಕಛೇರಿ ಅಪರ ನಿಬಂಧಕರಿಗೆ ನಿರ್ದೇಶಿಸಲಾಗಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

ಗೆ,

ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು

-------------------ಜಿಲ್ಲೆ

---------------------

**ಪ್ರತಿಗಳು:–**

1. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು
2. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
4. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರುಗಳಿಗೆ
5. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರುಗಳಿಗೆ
6. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಜಂಟಿ ನಿಬಂಧಕರುಗಳಿಗೆ
7. ಎಲ್ಲಾ ಪ್ರಾಂತೀಯ ಜಂಟಿ ನಿಬಂಧಕರುಗಳಿಗೆ
8. ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು
9. ರಾಜ್ಯದ ಮಟ್ಟದ ಎಲ್ಲಾ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಿಗೆ
10. ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ
11. ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರಿಗೆ
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲಿ ನಿ., ರೇಸ್ ಕೋರ್ಸ್ ರಸ್ತೆ, ಬೆಂಗಳೂರು
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು
14. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಕೆ.ಎಂ.ಎಫ್ ಬೆಂಗಳೂರು
15. ಸುತ್ತೋಲೆ ಕಡತ /ರಕ್ಷಾ ಕಡತ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘ ಸಂಸ್ಥೆಗಳ ಆಡಳಿತ ಮಂಡಳಿ ಚುನಾವಣೆಗೆ ಪೋಲೀಸ್ ಸಿಬ್ಬಂದಿಯನ್ನು ಒದಗಿಸುವಿಕೆ- ಬಂದೋಬಸ್ತ್ ಕರ್ತವ್ಯದ ಸಂಬಂಧ ಶುಲ್ಕ ಪಾವತಿ ದರವನ್ನು ನಿಗಧಿಪಡಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 136 ಇಎಫ್ಎಸ್ 2006, ದಿನಾಂಕ:21/08/2012.
2. ಸಹಕಾರ ಚುನಾವಣಾ ಆಯುಕ್ತರು ರವರ ಪತ್ರ ಸಂಖ್ಯೆ ಸಚುಆ/08/2013-14/220, ದಿನಾಂಕ:20/08/2013.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಪೋಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ವಾಣಿಜ್ಯ ಚಟುವಟಿಕೆ, ಮನರಂಜನಾ ಸ್ಥಳಗಳಿಗೆ ಹಾಗೂ ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜಿಸಿದಾಗ ವಸೂಲಿ ಮಾಡುವ ಶುಲ್ಕವನ್ನು ಹೆಚ್ಚಿಸಲು ಷರತ್ತುಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಚುನಾವಣಾ ಆಯುಕ್ತರು ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಗೆ ಪೋಲೀಸ್ ಸಿಬ್ಬಂದಿಯನ್ನು ನಿಯೋಜಿಸುವಿಕೆ, ಮತ್ತು ಅವರ ವೆಚ್ಚವನ್ನು ಭರಿಸುವ ಕುರಿತು ಪೋಲೀಸ್ ಸಿಬ್ಬಂದಿ/ಅಧಿಕಾರಿಗಳನ್ನು ವಾಣಿಜ್ಯ ಚಟುವಟಿಕೆಗಳಿಗೆ, ಅಂದರೆ ಸಿನಿಮಾ, ಕ್ರೀಡಾ ಪಂದ್ಯ, ವಸ್ತು ಪ್ರದರ್ಶನ, ರೇಸ್ ಕೋರ್ಸ್ ಇತ್ಯಾದಿ ಮನರಂಜನಾ ಸ್ಥಳಗಳಿಗೆ ಬಂದೋಬಸ್ತ್ ನಿಯೋಜಿಸುವ ಸಂಬಂಧ ವಸೂಲಿ ಮಾಡಬೇಕಾದ ಶುಲ್ಕಗಳ ಬಗ್ಗೆ ವಿವರಗಳಿರುತ್ತವೆ. ಸಹಕಾರ ಸಂಘಗಳ ಆರ್ಥಿಕ ಚಟುವಟಿಕೆಗಳ ಉದ್ದೇಶಗಳನ್ನು ಹೊಂದಿದ್ದರೂ ಸೇವಾ ಸಂಸ್ಥೆಗಳಾಗಿರುತ್ತವೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣಾ ಸಂದರ್ಭ/ಅಥವಾ ಇನ್ನಾವುದೇ ವಿಶೇಷ ಸಂಚರ್ಭಗಳಲ್ಲಿ ಮಾತ್ರ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಪೋಲೀಸ್ ಬಂದೋಬಸ್ತ್‌ಗಾಗಿ ಕೋರಿಕೆಗಳನ್ನು ಆರಕ್ಷಕ ಅಧಿಕಾರಿಗಳಿಗೆ ಸಲ್ಲಿಸುತ್ತವೆ. ಸಿನಿಮಾ/ಕ್ರೀಡಾ ಪಂದ್ಯಾ/ವಸ್ತು ಪ್ರದರ್ಶನ ರೇಸ್ ಕೋರ್ಸ ಈ ರೀತಿಯ ಚಟುವಟಿಕೆಗಳು ಇಡೀ ವರ್ಷದಲ್ಲಿ ನಿರಂತರವಾಗಿ ನಡೆಯುವ ಚಟುವಟಿಕೆಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಮನರಂಜನಾ ಚಟುವಟಿಕೆಗಳನ್ನು ಹೊಂದಿರುವ ಸಂಸ್ಥೆಗಳನ್ನು ಸಹಕಾರ ಸಂಸ್ಥೆಗಳಿಗೆ ಹೋಲಿಸುವುದು ಸೂಕ್ತವೆನಿಸುವುದಿಲ್ಲ. ಆದೇಶ ಸಂಖ್ಯೆ: ಹೆಚ್‌ಡಿ 210 ಎಸ್ಎಸ್‌ಟಿ 2013 ದಿನಾಂಕ:13/08/2013ರಂತೆ ಮನರಂಜನಾ ಸಂಸ್ಥೆಗಳಿಗೆ ನಿಗಧಿಪಡಿಸಿರುವ ದರಗಳಲ್ಲೇ, ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಸುವ ಸಹಕಾರಿ ಸಂಸ್ಥೆಗಳಿಗೂ ನಿಗದಿಪಡಿಸಿ ಶುಲ್ಕ ವಸೂಲಿ ಮಾಡುವುದು ಸರಿಯಲ್ಲ. ರಾಜ್ಯ ಚುನಾವಣಾ ಆಯೋಗವು ನಡೆಸುವ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯ್ತಿ/ನಗರಸಭೆ/ಪುರಸಭೆ/ಕಾರ್ಪೋರೇಷನ್ ಇನ್ನಿತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾನೂನು ಹಾಗೂ ಶಿಸ್ತು ಪಾಲನೆಗಾಗಿ ಒಳಾಡಳಿತ ಇಲಾಖೆಯೇ ಬಂದೋಬಸ್ತ್ ವ್ಯವಸ್ಥೆ ಮಾಡುವ ವ್ಯವಸ್ಥೆ ಇದ್ದು ಇದಕ್ಕೆ ಯಾವುದೇ ದರ ವಸೂಲಿ ಮಾಡಲಾಗುತ್ತಿಲ್ಲ. ಭಾರತ ಸಂವಿಧಾನಕ್ಕೆ ಮಾಡಲಾದ 97ನೇ ತಿದ್ದುಪಡಿ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2012ರಲ್ಲಿ ತಿದ್ದುಪಡಿ ತಂದಿದ್ದು ಅದರಂತೆ ಸರ್ಕಾರವು ರಾಜ್ಯದಲ್ಲಿನ ಸಹಕಾರ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯ ಸಹಕಾರ ಚುನಾವಣಾ ಆಯೋಗವನ್ನು ರಚನೆ ಮಾಡಿರುತ್ತದೆ. ಈ ಆಯೋಗಕ್ಕೆ ಆಯುಕ್ತರನ್ನು ಹಾಗೂ ಕಾರ್ಯದರ್ಶಿಯನ್ನು ಸರ್ಕಾರವು ಈಗಾಗಲೇ ನೇಮಿಸಿದ್ದು, ಪ್ರಸ್ತುತ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಅಧಿಸೂಚನೆ ಹೊರಡಿಸಿದ್ದು, ಜಿಲ್ಲಾ ಚುನಾವಣಾ ಅಧಿಕಾರಿಗಳನ್ನು/ರಿಟರ್ನಿಂಗ್ ಆಫೀಸರ್‌ಗಳನ್ನು ಆಯೋಗ ನೇಮಿಸಿರುತ್ತದೆ. ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆಗಳ

ಪ್ರಕ್ರಿಯೆಯು ಪ್ರಾರಂಭಗೊಂಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ/ರಾಜ್ಯ ಚುನಾವಣಾ ಆಯೋಗವು ನಡೆಸುವ ಲೋಕಸಭಾ, ವಿಧಾನಸಭೆ, ನಗರಸಭೆ, ಪುರಸಭೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಂತೆಯೇ ರಾಜ್ಯ ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸುವ ಸಹಕಾರ ಸಂಸ್ಥೆಗಳ ಚುನಾವಣೆ ಸಂದರ್ಭಗಳಲ್ಲಿ ಯಾವುದೇ ಶುಲ್ಕ ವಿಧಿಸದೆ, ಕಾನೂನು ಮತ್ತು ಶಿಸ್ತುಪಾಲನೆ ವ್ಯವಸ್ಥೆ ಮಾಡುವುದು ಸೂಕ್ತವಾಗಿರುತ್ತದೆ. ಒಂದು ವೇಳೆ ಸಿಬ್ಬಂದಿ ಕೊರತೆ/ಆರ್ಥಿಕ ನಿರ್ಬಂಧ ಇನ್ನಿತರ ಕಾರಣಗಳಿಂದಾಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಗೆ ಅನಿವಾರ್ಯವಾಗಿ ಶುಲ್ಕ ವಿಧಿಸಲೇಬೇಕಾದ ಪರಿಸ್ಥಿತಿಯ ಸಂದರ್ಭದಲ್ಲಿ ಮನರಂಜನಾ ಸಂಸ್ಥೆಗಳಿಗೆ ಗೊತ್ತುಪಡಿಸಿದ ದರದಂತೆ, ಸಹಕಾರಿ ಸಂಸ್ಥೆಗಳಿಂದ ಶುಲ್ಕ ವಸೂಲು ಮಾಡುವುದು. ಸೂಕ್ತವಲ್ಲವಾದ ಕಾರಣ ಸಹಕಾರ ಸಂಸ್ಥೆಗಳ ಚುನಾವಣೆ ಸಂಬಂಧ ಅತ್ಯಂತ ಕನಿಷ್ಟ ಮಟ್ಟದಲ್ಲಿ ದರ ನಿಗಧಿಪಡಿಸುವುದು ಸೂಕ್ತವೆನಿಸುತ್ತದೆ. ಇಂತಹ ಸಂದರ್ಭದಲ್ಲಿ ಈ ಕೆಳಕಂಡಂತೆ ಸಹಕಾರ ಸಂಸ್ಥೆಗಳನ್ನು ವರ್ಗೀಕರಣ ಮಾಡಿ ಸಮಂಜಸ ರೀತಿಯಲ್ಲಿ ದರಗಳನ್ನು ನಿಗಧಿಪಡಿಸುವ ಬಗ್ಗೆ ಪರಿಶೀಲಿಸಿ ಆಡಿಟ್ ರೀತ್ಯಾ ನಷ್ಟದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಶುಲ್ಕ ನಿಗಧಿಪಡಿಸಿದ ದರದಲ್ಲಿ ಶೇ.50 ರಷ್ಟು ವಿನಾಯ್ತಿಯನ್ನು ನೀಡಬೇಕೆಂದು ಹಾಗೂ ರಾಜ್ಯದಲ್ಲಿನ ಜನತೆಯ ಆರ್ಥಿಕ ಸ್ಥಿತಿ ಉತ್ತಮ ಪಡೆಸುವಲ್ಲಿ, ಹಾಗು ರಾಜ್ಯದ ಒಟ್ಟಾರೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಹಿತ ದೃಷ್ಟಿಯಿಂದ ಮೇಲೆ ವಿವರಿಸಿರುವ ಅಂಶಗಳನ್ನು ತಾವು ಪರಿಶೀಲಿಸಿ, ಸಹಕಾರ ಸಂಸ್ಥೆಗಲ ಚುನಾವಣೆಗಳ ಸಂದರ್ಭದಲ್ಲಿ ಕಾನೂನು ಹಾಗೂ ಶಿಸ್ತುಪಾಲನೆ ದೃಷ್ಠಿಯಿಂದ ಪೊಲೀಸ್ ಬಂದೋಬಸ್ತ ವ್ಯವಸ್ಥೆಗಾಗಿ ಸಮಂಜಸವಾಗಿ ನ್ಯಾಯಯುತವಾದ ಶುಲ್ಕವನ್ನು ನಿಗಧಿಪಡಿಸಿ ಆದೇಶ ಹೊರಡಿಸಬೇಕೆಂದು ಸಹಕಾರ ಚುನಾವಣಾ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

ಸಹಕಾರ ಚುನಾವಣಾ ಆಯುಕ್ತರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 210 ಎಸ್‌ಎಸ್‌ಟಿ 2013**
**ಬೆಂಗಳೂರು, ದಿನಾಂಕ:04/03/2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಜಿಲ್ಲಾ ಮಟ್ಟದ ಒಕ್ಕೂಟಗಳು, ಪಟ್ಟಣ ಸಹಕಾರ ಸಂಘಗಳು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಗೆ ಶೇ50% ರಷ್ಟು ಹಾಗೂ ಉಳಿದ ಸಹಕಾರಿ ಸಂಸ್ಥೆಗಳಿಗೆ ಕನಿಷ್ಟ ಶೇ25 ರಷ್ಟು ಶುಲ್ಕವನ್ನು ವಿಧಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ:54:ವೆಚ್ಚ–11:2014 ದಿನಾಂಕ:10/02/2014ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,**
**ಮತ್ತು ಅವರ ಹೆಸರಿನಲ್ಲಿ,**

**[ಹೆಚ್.ಆರ್. ಪುಟ್ಟೇಗೌಡ]**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಒಳಾಡಳಿತ ಇಲಾಖೆ(ಪೊಲೀಸ್ ವೆಚ್ಚ)**

ಪ್ರತಿ:

1. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.

೬೭

2. ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು.
3. ಸಹಕಾರ ಚುನಾವಣಾ ಆಯುಕ್ತರು, ಬಸವನಗುಡಿ, ನಂ.3, 2ನೇ ಮಹಡಿ ಕರಿಯಪ್ಪ ರಸ್ತೆ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು.
5. ನಿರ್ದೇಶಕರು. ಖಜಾನೆ ನಿರ್ದೇಶನಾಲಯ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-11)
7. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಸಮನ್ವಯ)
8. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರ

ಸಂಖ್ಯೆ:ಹೆಚ್‌ಡಿ:210:ಎಸ್‌ಎಸ್‌ಟಿ:2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:13/08/2013.

**ಜರೂರು**

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು.

ಇವರಿಗೆ:
ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,
ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ, (ಕೃಷ್ಣರಾವ್ ಪಾರ್ಕ್ ಮುಂಬಾಗ),
ಬೆಂಗಳೂರು.

ಮಾನ್ಯರೇ,

ವಿಷಯ: ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘ-ಸಂಸ್ಥೆಗಳ ಚುನಾವಣೆಗೆ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವ ಬಗ್ಗೆ.

ಉಲ್ಲೇಖ: ಪತ್ರದ ಸಂಖ್ಯೆ: ಸಚುಆ/08/2013-14, ದಿನಾಂಕ:25.06.2013.

-@@@-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದತ್ತ ಗಮನ ಸೆಳೆದಿದೆ. ಪೊಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ವಾಣಿಜ್ಯ ಚಟುವಟಿಕೆಗಳಿಗೆ, ಮನರಂಜನಾ ಸ್ಥಳಗಳಿಗೆ ಹಾಗೂ ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜಿಸಿದಾಗ ವಸೂಲಿ ಮಾಡಬೇಕಾದ ಶುಲ್ಕವನ್ನು ಹೆಚ್ಚಿಸಲು ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ 136 ಇಎಫ್‌ಎಸ್ 2012, ದಿನಾಂಕ:21/08/2012ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. ಆದ್ದರಿಂದ ಆದೇಶ ಸಂಖ್ಯೆ:ಹೆಚ್‌ಡಿ 136 ಇಎಫ್‌ಎಸ್ 2012, ದಿನಾಂಕ:21/08/2012ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸುತ್ತಾ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

[ಹೆಚ್.ಆರ್. ಪುಟ್ಟೇಗೌಡ]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್ ವೆಚ್ಚ)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪೊಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ವಾಣಿಜ್ಯ ಚಟುವಟಿಕೆಗಳಿಗೆ, ಮನರಂಜನಾ ಸ್ಥಳಗಳಿಗೆ ಹಾಗೂ ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜಿಸಿದಾಗ ವಸೂಲಿ ಮಾಡುವ ಶುಲ್ಕವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ: ಲೆಕ್ಕ-2/56/2009-10, ದಿನಾಂಕ:24/08/2010 & 07/06/2012.

ಪ್ರಸ್ತಾವನೆ:

ಮೇಲೆ ಓದಲಾದ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯಲ್ಲಿ, ಸಿನಿಮಾ, ಕ್ರೀಡಾ ಪಂದ್ಯ, ವಸ್ತು ಪ್ರದರ್ಶನ, ರೇಸ್ ಕೋರ್ಸ್, ವಾಣಿಜ್ಯ ಚಟುವಟಿಕೆಗಳಿಗೆ, ಮನರಂಜನಾ ಸ್ಥಳಗಳಿಗೆ ಬಂದೋಬಸ್ತ್ ಕರ್ತವ್ಯಕ್ಕೆ 08 ಗಂಟೆಗಳ ಕಾಲ ಪೊಲೀಸ್ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಿದಾಗ ಅಂತಹ ಸಂಸ್ಥೆಗಳಿಂದ ವಸೂಲಿ ಮಾಡುವ ಶುಲ್ಕ ಮತ್ತು ಇದರಲ್ಲಿ ಶೇಕಡ 50 ರಷ್ಟು ಮೊತ್ತವನ್ನು ಪೊಲೀಸ್ ಕಲ್ಯಾಣ ನಿಧಿಗೆ ಸಂದಾಯ ಮಾಡುವ ಬಗ್ಗೆ ಈ ಕೆಳಕಂಡಂತೆ ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

| ಕ್ರಮ ಸಂ. | ಹುದ್ದೆ | ವಿವಿಧ ಸಂಸ್ಥೆಗಳಿಂದ ಪ್ರಸ್ತುತ ವಸೂಲಿ ಮಾಡುತ್ತಿರುವ ದರ ರೂ. | ಪರಿಷ್ಕೃತ ದರವನ್ನು ವಸೂಲಿ ಮಾಡಲು ಹೆಚ್ಚಿಸಬೇಕಾಗಿರುವ ದರ ರೂ. | ಹೆಚ್ಚಿಗೆ ಮಾಡಲಾದ ವಸೂಲಾತಿ ಒಟ್ಟು ಮೊತ್ತದಲ್ಲಿ | |
|---|---|---|---|---|---|
| | | | | ಪೊಲೀಸ್ ಇಲಾಖೆಗೆ ಜಮಾ ಮಾಡಬೇಕಾದ ಮೊತ್ತ 50% | ಪೊಲೀಸ್ ಕಲ್ಯಾಣ ನಿಧಿಗೆ ಸಂದಾಯ ಮಾಡಬೇಕಾದ ಮೊತ್ತ 50% |
| 1 | 2 | 3 | 4 | 5 | 6 |
| 1 | ಉಪ ಪೊಲೀಸ್ ಅಧೀಕ್ಷಕರು (ಒಬ್ಬರಿಗೆ) | - | 1500.00 | 750.00 | 750.00 |
| 2 | ಪೊಲೀಸ್ ನಿರೀಕ್ಷಕರು (ಒಬ್ಬರಿಗೆ) | 460.00 | 1000.00 | 500.00 | 500.00 |
| 3 | ಪೊಲೀಸ್ ಉಪ-ನಿರೀಕ್ಷಕರು(ಒಬ್ಬರಿಗೆ) | 420.00 | 900.00 | 450.00 | 450.00 |
| 4 | ಸಹಾಯಕ ಉಪ-ನಿರೀಕ್ಷಕರು(ಒಬ್ಬರಿಗೆ) | 315.00 | 650.00 | 325.00 | 325.00 |
| 5 | ಪೊಲೀಸ್ ಮುಖ್ಯ ಪೇದೆ (ಸಿಹೆಚ್‌ಸಿ/ಎಹೆಚ್‌ಡಿ)(ಒಬ್ಬರಿಗೆ) | 295.00 | 600.00 | 300.00 | 300.00 |
| 6 | ಪೊಲೀಸ್ ಪೇದೆ (ಸಿಪಿಸಿ/ಎಪಿಸಿ)(ಒಬ್ಬರಿಗೆ) | 265.00 | 550.00 | 275.00 | 275.00 |

ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 136 ಇಎಫ್‌ಎಸ್ 2010**
**ಬೆಂಗಳೂರು, ದಿನಾಂಕ:21-08-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ವಾಣಿಜ್ಯ ಚಟುವಟಿಕೆ, ಮನರಂಜನಾ ಸ್ಥಳಗಳಿಗೆ ಹಾಗೂ ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜಿಸಿದಾಗ ವಸೂಲಿ ಮಾಡುವ ಶುಲ್ಕವನ್ನು ಹೆಚ್ಚಿಸಲು ಈ ಕೆಳಕಂಡ ಷರತ್ತುಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿದೆ.

(a) Entire collected fee should be deposited in the consolidated Fund under a specified Head of Account i.e. "0055-00-102-0-00 – Police Supplied to other parties".

(b) 50% of the fee collected (net of service tax) during a year can be given as a grant to police welfare Fund during the subsequest year (under the Head of Account. "2055-00-108-0-12 – Grant to Police Welfare Fund out of Bandobust receipts"). Such grant may be limited to Rs.10 crore in a year to begin with. The limit may be raised every three years.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 193 ವೆಚ್ಚ 11/2012. ದಿನಾಂಕ:30/06/2012ರ ಸಹಮತಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಆಇ:04:ಟಿಎಫ್‌ಪಿ:2012. ದಿನಾಂಕ:27/04/2012ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

[ಹೆಚ್.ಆರ್. ಪುಟ್ಟೇಗೌಡ]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್ ವೆಚ್ಚ)

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು.
3. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ
5. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ)/ಆರ್ಥಿಕ ಇಲಾಖೆ(ವೆಚ್ಚ-11)

ಪ್ರತಿ:

1.ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು. ಒಳಾಡಳಿತ ಇಲಾಖೆ.

2.ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು. (ಪಿ.ಸಿ.ಎ.ಎಸ್) ಒಳಾಡಳಿತ ಇಲಾಖೆ.

3.ಅಪರ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, (ಪೊಲೀಸ್ ಸೇವೆಗಳು) ಒಳಾಡಳಿತ ಇಲಾಖೆ.